ಕಿತ್ತು, ತಮಗೂ ವಿಂಡೀಸ್ ಬೌಲರ್‌ಗಳಷ್ಟೇ ಕಸುವಿದೆ ಎನ್ನುವುದನ್ನು ರುಜುವಾತು ಪಡಿಸಿದರು. ‘ಅಮೀರ್ ಬಿಗ್ ಗೇಮ್ ಗನ್’ ಎಂದು ಮಿಕಿ ಆರ್ಥರ್ ಕೊಟ್ಟಿರುವ ಒಂದು ಸಾಲಿನ ಸರ್ಟಿಫಿಕೇಟಿಗೂ ಅರ್ಥವಿದೆ.

ಶಾದಾಬ್ ಒಂದು ತರಹ ‘ಸೈಲೆಂಟ್ ಕಿಲ್ಲರ್’. ಟ್ರೆಂಟ್ ಬ್ರಿಜ್‌ನಲ್ಲಿ ಇಂಗ್ಲೆಂಡ್ ಎದುರು ಅವರು ಮಾಡಿದ 39ರಿಂದ 43 ಓವರ್‌ಗಳ ಪೈಕಿ ಮೂರು ಓವರ್‌ಗಳಲ್ಲಿ ಕೊಟ್ಟಿದ್ದು ಬರೀ 13 ರನ್. ಕಿತ್ತಿದ್ದು ಜೋ ರೂಟ್ ವಿಕೆಟ್ ಅನ್ನು. ಸುಮಾರು ಆರು ಗೂಗ್ಲಿಗಳು ಸೇರಿದ್ದ ಅವರ ಲೆಗ್ ಸ್ಪಿನ್ ಬೌಲಿಂಗ್ ಒಂದು ರೀತಿ ಅಮೀರ್ ವೇಗದ ಹೋಮಕ್ಕೆ ಸಲ್ಲಿಸಿದ ಹವಿಸ್ಸಿನಂತೆ. ಇನ್ನೂ ಇಪ್ಪತ್ತು ವಯಸ್ಸಿನ ಶಾದಾಬ್ ಕಂಡು ಶೇನ್ ವಾರ್ನ್, ಅನಿಲ್ ಕುಂಬ್ಳೆ ಕೂಡ ಕಣ್ಣಗಲಿಸಿಯಾರು.

ವಿಂಡೀಸ್ ಅಂದೊಡನೆ ನೆನಪಾಯಿತು. ಈ ವಿಶ್ವಕಪ್ ನಲ್ಲಿ ಈ ತಂಡದವರು ನಿಸ್ಸಂಶಯವಾಗಿ ‘ಡಾರ್ಕ್ ಹಾರ್ಸ್’ಗಳು. ಓಷೇನ್ ಥಾಮಸ್, ಜೇಸನ್ ಹೋಲ್ಡರ್, ಶೆಲ್ಡನ್ ಕಾಟ್ರೆಲ್ ಈ ಮೂವರೂ ಬೌಲರ್‌ಗಳು ಸ್ಪಷ್ಟವಾದ ತಂತ್ರವನ್ನು ಈ ಸಲ ಪ್ರದರ್ಶಿಸಿದ್ದಾರೆ. ಶಾರ್ಟ್ ಆಫ್ ಲೆಂಗ್ತ್ ಎಸೆತಗಳನ್ನು ಹೆಚ್ಚಾಗಿ ಹಾಕುತ್ತಾ, ವೇಗ ವೈವಿಧ್ಯದಲ್ಲೇ ದಿಢೀರನೆ ಫುಲ್ಲರ್ ಲೆಂಗ್ತ್ ಅಥವಾ ಗುಡ್ ಲೆಂಗ್ತ್ ಪ್ರಯೋಗಿಸಿ ಎದುರಾಳಿಗಳನ್ನು ಕೆಣಕುವ ತಂತ್ರ ಅದು. ಪಾಕಿಸ್ತಾನದ ವಿರುದ್ಧವಷ್ಟೇ ಅಲ್ಲದೆ ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲೂ ಇದು ರುಜುವಾತಾಯಿತು. ಆಸ್ಟ್ರೇಲಿಯಾದ ಮೇಲಿನ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಈ ತಂತ್ರಕ್ಕೆ ನಿರುತ್ತರರಾದರು. 38 ರನ್ ಆಗುವಷ್ಟರಲ್ಲಿ 4 ವಿಕೆಟ್‌ಗಳನ್ನು ಆ ತಂಡದವರು ಕಳೆದುಕೊಂಡಿದ್ದರು. ಆ್ಯಂಡ್ರೆ ರಸೆಲ್ ಕೂಡ ಬ್ಯಾಟ್ಸ್‌ಮನ್‌ಗಳು ಕೈ ಸಡಿಲಿಸಿ ಆಡುವಂತೆ ಪ್ರೇರೇಪಿಸಿ ಕೆಲವು ವಿಕೆಟ್‌ಗಳನ್ನು ಪಡೆಯುತ್ತಿರುವುದು ವಿಂಡೀಸ್ ಬೌಲಿಂಗ್ ಪಡೆಯ ಸಾಂಘಿಕ ಯತ್ನಕ್ಕೆ ಸಾಕ್ಷಿ. ರಕ್ಷಣಾಪಡೆಯಲ್ಲಿ ಕೆಲಸ ಮಾಡುತ್ತಿರುವ ಕಾಟ್ರೆಲ್, ವಿಕೆಟ್ ಪಡೆದೊಡನೆ ಸೆಲ್ಯೂಟ್ ಹೊಡೆಯುತ್ತಾ ನಿಲ್ಲುವ ಪರಿ ವಿಂಡೀಸ್ ತಂಡದ ಬೌಲರ್‌ಗಳ ಶಿಸ್ತಿನ ರೂಪಕದಂತೆ ಕಾಣುತ್ತಿದೆ.

ಡೇಲ್ ಸ್ಟೇನ್ ಒಂದೂ ಎಸೆತ ಬೌಲ್ ಮಾಡದೆಯೇ ಈ ಸಲದ ವಿಶ್ವಕಪ್‌ನಿಂದ ಹೊರನಡೆದರು. ಸ್ಟೇನ್ ವೇಗ ಹಾಗೂ ಸ್ವಿಂಗ್‌ಗಳ ಅಭಿಮಾನಿಗಳಿಗೆ ಇದು ಕೆಟ್ಟ ಸುದ್ದಿಯೇ ಹೌದು. ಅವರ ಅನುಪಸ್ಥಿತಿಯಲ್ಲಿ ಕಗಿಸೊ ರಬಾಡಾ ಮೇಲೆ ದಕ್ಷಿಣ ಆಫ್ರಿಕಾ ನೆಚ್ಚುಗೆ ಇದೆ. ಭಾರತದ ಸ್ಲಾಗ್ ಓವರ್ ಶೂರ ಜಸ್‌ಪ್ರೀತ್ ಬೂಮ್ರಾ, ದಕ್ಷಿಣ ಆಫ್ರಿಕಾ ಎದುರಿನ ಮೊದಲ ಪಂದ್ಯದ ಪ್ರಥಮ ಸ್ಪೆಲ್‌ನಲ್ಲೂ ಮಾಡಿದ ಮೋಡಿ ವಿಶ್ವದ ನಂಬರ್ ಒನ್ ಬೌಲರ್ ಅವರು ಯಾಕೆ ಎನ್ನುವುದನ್ನು ಪುಷ್ಟೀಕರಿಸಿದೆ.

ರಬಾಡಾ ಭುಜದ ಮೇಲೆ ಈಗ ಹೆಚ್ಚು ಭಾರವಿದೆ. ಲುಂಗಿ ಗಿಡಿ ಸ್ನಾಯುಸೆಳೆತದಿಂದ ಮುಖ ಕಿವುಚಿರುವ, ಸ್ಟೇನ್ ಮನೆಗೆ ಮರಳಿರುವ,




ಬಿಗ್ ಗೇಮ್ ಗನ್: ಪಾಕಿಸ್ತಾನದ ಮೊಹಮ್ಮದ್ ಅಮೀರ್




ಶಿಸ್ತಿನ ಸಿಪಾಯಿ: ವೆಸ್ಟ್ ಇಂಡೀಸ್‌ನ ಭರವಸೆಯ ವೇಗಿ ಶೆಲ್ಡನ್ ಕಾಟ್ರೆಲ್




ಸೈಲೆಂಟ್ ಕಿಲ್ಲರ್: ಪಾಕಿಸ್ತಾನದ ಶಾದಾಬ್

ತಮ್ಮ ತಂಡ ಮೊದಲ ಮೂರು ಪಂದ್ಯಗಳಲ್ಲೂ ಸೋತಿರುವ ಸಂದರ್ಭದ ಸಿಟ್ಟು–ಹತಾಶೆ ಬೆರೆತ ಭಾವ ಅವರಲ್ಲಿ ಕಿಚ್ಚು ಹೊತ್ತಿಸಿದರೂ ಅಚ್ಚರಿಯಿಲ್ಲ. ಭಾರತದ ಎದುರಿನ ಲೋ ಸ್ಕೋರ್ ಪಂದ್ಯದಲ್ಲಿ ಅವರಿಗೆ ಮಾರಿಸ್ ನೀಡಿದ ಸಾಥ್ ಗಮನಾರ್ಹ. ವ್ಯತಿರಿಕ್ತ ಪರಿಸ್ಥಿತಿಯನ್ನೂ ಮೀರಿ ಬೌಲಿಂಗ್ ಸಾಂಘಿಕ ಬಲ ಕಾಪಾಡಿಕೊಳ್ಳುವುದು ಹೇಗೆ ಎನ್ನುವುದಕ್ಕೆ ಅದು ಪ್ರಾತ್ಯಕ್ಷಿಕೆಯಂತಿತ್ತು. ದುರದೃಷ್ಟವಶಾತ್ ರೋಹಿತ್ ಶರ್ಮ ಆ ದಿನ ಮೇಲಿಂದ ಮೇಲೆ ಜೀವದಾನಗಳನ್ನು ಪಡೆದು, ಶತಕದ ರಾಶಿ ಮೇಲೆ ನಿಂತುಬಿಟ್ಟರು. ಒಬ್ಬ ಬ್ಯಾಟ್ಸ್‌ಮನ್ ಹಾಗೆ ನಿಂತುಬಿಟ್ಟಾಗ ಬೌಲರ್‌ಗಳ ಶ್ರಮವೆಲ್ಲ ಹಿಂದೆ ಸರಿದಂತಾಗುತ್ತದೆ. ಯಜುವೇಂದ್ರ ಚಾಹಲ್ ಪಡೆದ ನಾಲ್ಕು ವಿಕೆಟ್‌ಗಳಿಗೂ ಪಂದ್ಯ ಪುರುಷೋತ್ತಮ ಗೌರವ ಸಲ್ಲಲಿಲ್ಲವಲ್ಲ; ಹಾಗೆ.

ಎಲ್ಲ ತಂಡಗಳಲ್ಲೂ ರಬಾಡಾ, ಅಮೀರ್, ಬೂಮ್ರಾ, ಓಷೇನ್ ಥಾಮಸ್ ತರಹವೇ ರಕ್ತ ಕುದಿಸಿಕೊಳ್ಳುವ ಯುವಕರಿದ್ದಾರೆ. ಆಸ್ಟ್ರೇಲಿಯಾದ ಅನುಭವಿ ಬೌಲರ್ ಮಿಷೆಲ್ ಸ್ಟಾರ್ಕ್ ಚಕಚಕನೆ ವಿಂಡೀಸರ ವಿಕೆಟ್‌ಗಳನ್ನು ಉರುಳಿಸಿ ಗೆಲುವನ್ನು ಎಳೆದುಕೊಳ್ಳಲಿಲ್ಲವೇ? ಮೊದಲ ಪಂದ್ಯದಲ್ಲೇ ಇಂಗ್ಲೆಂಡ್ ಎದುರು ಲುಂಗಿ ಗಿಡಿ ಮೂರು ವಿಕೆಟ್ ಪಡೆದರಲ್ಲವೇ? ಇಂಗ್ಲೆಂಡ್ ನ ಜೊಫ್ರಾ ಆರ್ಚರ್ ವಿಶ್ವಕಪ್‌ನ ಮೊದಲ ಪಂದ್ಯದಲ್ಲೇ ಮೂರು ವಿಕೆಟ್ ಕಬಳಿಸಿ ಮೊನಚು ತೋರಲಿಲ್ಲವೇ? ನ್ಯೂಜಿಲೆಂಡ್‌ನ ಮ್ಯಾಟ್ ಹೆನ್ರಿ ಹಾಗೂ ಫರ್ಗ್ಯೂಸನ್ ಮೊದಲ ಪಂದ್ಯದಲ್ಲೇ ತಲಾ ಮೂರು ವಿಕೆಟ್ ಉರುಳಿಸಿ, ಶ್ರೀಲಂಕಾ ತಂಡವನ್ನು ಬರೀ 136ಕ್ಕೆ ಕಟ್ಟಿಹಾಕಲಿಲ್ಲವೇ? ಹಾಗೆಯೇ ಬಾಂಗ್ಲಾದ ಮುಷ್ತಫಿಜುರ್ ರೆಹಮಾನ್ ದಕ್ಷಿಣ ಆಫ್ರಿಕಾ ಬ್ಯಾಟಿಂಗ್ ಜಂಘಾಬಲಕ್ಕೇ ಸವಾಲೊಡ್ಡಲಿಲ್ಲವೇ? ಶ್ರೀಲಂಕಾದ ಲಾಸಿತ್ ಮಾಲಿಂಗ ಇನ್ನೂ ತಮ್ಮ ಕೊನೆಯ ಓವರ್ ಗಳ ಯಾರ್ಕರ್ ನೆಚ್ಚಿಕೊಂಡರೆ, ಅವರ ಕಸಿನ್ ತರಹದ ಬೌಲಿಂಗ್ ಶೈಲಿಯ, ವಿಂಡೀಸ್‌ನ ಕಾಟ್ರೆಲ್ ಮನರಂಜನೆಯ ಹೊಸ ನಮೂನೆ. ಇವರ ನಡುವೆಯೇ ಇಂಗ್ಲೆಂಡ್ ನ ವೋಕ್ಸ್ ತಮ್ಮ ಅಸ್ತಿತ್ವಕ್ಕೆ ರುಜು ಮಾಡಿದ್ದಾರೆ.

ಅಫ್ಘಾನಿಸ್ತಾನದ ಮೊಹಮ್ಮದ್ ನಬಿ ತಮ್ಮ ಗೂಗ್ಲಿಗಳನ್ನು ಅನುಭವಿಸುತ್ತಾ ಲಂಕಾದ ನಾಲ್ವರನ್ನು ಒಂದೇ ಪಂದ್ಯದಲ್ಲಿ ಔಟ್ ಮಾಡಿದ್ದು, ಚಾಹಲ್ ದಕ್ಷಿಣ ಆಫ್ರಿಕಾದ ನಾಲ್ವರಿಗೆ ಪೆವಿಲಿಯನ್ ಹಾದಿ ತೋರಿದ್ದು, ಆ್ಯಡಂ ಜಂಪಾ, ನರ್ಸ್ ಆಗೀಗ ಚೆಂಡು ತಿರುಗುವಂತೆ ಮಾಡುತ್ತಿರುವುದು, ಶಕೀಬ್ ಅಲ್ ಹಸನ್, ಕುಲದೀಪ್ ಇಬ್ಬರೂ ಎಡಗೈ ನಿಧಾನಗತಿಯ ಬೌಲಿಂಗ್ ವೈವಿಧ್ಯವನ್ನು ಒರೆಗೆಹಚ್ಚಿ ನೋಡುತ್ತಿರುವುದು, ಸ್ಯಾಂಟನರ್ ತಮಗೂ ಚೆಂಡು ತಿರುಗಿಸಲು ಬರುತ್ತಿದೆ ಎನ್ನುತ್ತಿರುವುದು... ಈ ಸಲದ ವಿಶ್ವಕಪ್ ನಲ್ಲಿ ಬ್ಯಾಟ್ಸ್‌ಮನ್‌ಗಳ ಮೆರವಣಿಗೆಯಷ್ಟೇ ಅಲ್ಲ, ಬೌಲರ್‌ಗಳ ಪರಾಕೂ ನಡೆಯುತ್ತಿದೆ ಎನ್ನುವುದಕ್ಕೆ ಕೆಲವು ಸಾಕ್ಷಿಗಳು.

ಮೊಗೆದುಕೊಳ್ಳಲು ಇನ್ನಷ್ಟು ಮನರಂಜನೆ ಬಾಕಿ ಇದೆ. ■